# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Integrum Energy Infrastructure Private Limited ಇವರಿಗೆ ವಿಜಯಪುರ ಜಿಲ್ಲೆಯ, ಬಸವನಬಾಗೇವಾಡಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 20 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ 08/ IEIPL-20 MW (14.7 W + 5.3 S)/Vijayapura/F-12/2023/0217 ದಿನಾಂಕ:19.01.2023.

2) ದಿನಾಂಕ:21.01.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಸಂ. 554
ದಿನಾಂಕ 9/2/23
ಬೆಂಗಳೂರು

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Integrum Energy Infrastructure Private Limited ಇವರಿಗೆ ವಿಜಯಪುರ ಜಿಲ್ಲೆಯ, ಬಸವನಬಾಗೇವಾಡಿ ತಾಲ್ಲೂಕಿನ ಟಕಲಕ್ಕಿ, ಮನ್ನೂರು, ಮುತ್ತಿಗಿ, ಬಸವನಬಾಗೇವಾಡಿ ಮತ್ತು ಜೈನಾಪುರ ಗ್ರಾಮಗಳಲ್ಲಿ 20 ಮೆ.ವ್ಯಾ (14.7 ಮೆ.ವ್ಯಾ ಪವನ + 5.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s Integrum Energy Infrastructure Private Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು M/s RBRK Investments Private Limited ಕಂಪನಿಯು 104 ಮೆ.ವ್ಯಾ. (2 MW X 52 WTG) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಪ್ರದೇಶದಲ್ಲಿದ್ದು, ಸದರಿ ಸ್ಥಳವು ಅಂದಾಜು 15000/- ಎಕರೆ ವಿಸ್ತೀರ್ಣ ಹೊಂದಿರುತ್ತದೆ. M/s RBRK Investments Private Limited ಕಂಪನಿಯು 104 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಉಪಯೋಗಿಸಿರುವ ಸ್ಥಳವನ್ನು ಹೊರತುಪಡಿಸಿ, ಉಳಿದ ಪ್ರದೇಶದಲ್ಲಿ M/s Integrum Energy Infrastructure Private Limited ಇವರು 14.7 ಮೆ.ವ್ಯಾ. ಸಾಮರ್ಥ್ಯದ 7 ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ ಲೆಕ್ಕೀಕರಿಸಿ, ಒಟ್ಟು 28 ಎಕರೆ (7 Nos of WTG X 4 acres = 28 Acres) ಜಮೀನನ್ನು ಟೋಪೋಶೀಟ್ ಸಂಖ್ಯೆ:47 P/14 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

MD KREDL

M/s Integrum Energy Infrastructure Private Limited ದಿನಾಂಕ:27.02.2021ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:15.03.2022ರ ಅಂತ್ಯಕ್ಕೆ ರೂ.136.50 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

AGM (W) 3/4/2

GM (Tech) KREDL

Wind Section
Inward No. 1637
Date 15/2/23

M/s Integrum Energy Infrastructure Private Limited ಕಂಪನಿಯು ಹೊಸ ಇಂಧನ ನೀತಿ 2022-27ರಂತೆ 20 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ಅರ್ಜಿ ಹಾಗೂ 30% ಸಂಸ್ಕರಣಾ ಶುಲ್ಕವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡಬೇಕಾಗಿರುತ್ತದೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Integrum Energy Infrastructure Private Limited ಇವರು ವಿಜಯಪುರ ಜಿಲ್ಲೆಯ, ಬಸವನಬಾಗೇವಾಡಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 20 ಮೆ.ವ್ಯಾ (14.7 ಮೆ.ವ್ಯಾ ಪವನ + 5.3 ಮೆ.ವ್ಯಾ ಸೌರ) ಸಾಮರ್ಥ್ಯದ ಹೈಬ್ರಿಡ್ (ಪವನ ಮತ್ತು ಸೌರ ಮಿಶ್ರಿತ) ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು ಅಳವಡಿಸುವ ವಿಂಡ್ ಟರ್ಬೈನ್ ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 07 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2000 ಕಿ.ವ್ಯಾ 6 ಟರ್ಬೈನ್‌ಗಳು ಹಾಗೂ 2700 ಕಿ.ವ್ಯಾನ 1 ಟರ್ಬೈನ್) ಅಳವಡಿಸಲು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಒಟ್ಟು 28 ಎಕರೆ (7 Nos of WTG x 4 Acres= 28 Acres) ಜಮೀನನ್ನು ಹಾಗೂ 5.3 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ ಸಾಮರ್ಥ್ಯಕ್ಕೆ 3.5 ಎಕರೆಯಂತೆ ಒಟ್ಟು 19 ಎಕರೆ (5.3 MW x 3.5 Acre = 19 Acres) ಜಮೀನು ಸೇರಿ ಒಟ್ಟು 47 ಎಕರೆ (28 Acre + 19 Acre =47 Acres) ಜಮೀನನ್ನು ಮಾತ್ರ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಟೋಪೋಶೀಟ್ ಸಂಖ್ಯೆ: 47 P/14 ರಲ್ಲಿ ಉಪಯೋಗಿಸಿಕೊಳ್ಳ ಬಹುದಾಗಿದೆ. ಸದರಿಯವರು 20 ಮೆ.ವ್ಯಾ (14.7 ಮೆ.ವ್ಯಾ ಪವನ + 5.3 ಮೆ.ವ್ಯಾ ಸೌರ) ಸಾಮರ್ಥ್ಯದಿಂದ ಉತ್ಪಾದಿಸುವ ವಿದ್ಯುತ್ತನ್ನು State Grid ವರ್ಗದಡಿಯಲ್ಲಿ KPTCL 220/110/33KV Basavana Bageawadi ಸಬ್-ಸ್ಟೇಷನ್‌ಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ.

ನಿರ್ದೇಶಕರು (ತಾಂತ್ರಿಕ), ಕೆಪಿಟಿಸಿಎಲ್ ಇವರು ಸದರಿ ಯೋಜನೆಗೆ Yalwar 400kV ಸಬ್-ಸ್ಟೇಷನ್ ಅನುಷ್ಠಾನಗೊಳಿಸಿದ ನಂತರ 220/110/33kV Basavana Bageawadi ಸಬ್-ಸ್ಟೇಷನ್‌ಗೆ ನೀಡಬಹುದಾಗಿದೆ ಎಂದು ತಿಳಿಸಿದರು. ಸಮಿತಿಯು ಸದರಿ ಯೋಜನೆಗೆ 220/110/33kV Basavana Bageawadi ಅಥವಾ ಲಭ್ಯವಿರುವ ಸಬ್-ಸ್ಟೇಷನ್‌ಗೆ Evacuation ನೀಡಲು KPTCL ಕ್ರಮ ಕೈಗೊಳ್ಳಲು ತಿಳಿಸಿ, ಇದರ ಬದಲಾಗಿ evacuation ಲಭ್ಯವಿರುವ ಸಬ್-ಸ್ಟೇಷನ್‌ಗಳನ್ನು ಪರಿಶೀಲಿಸಿ ಅನುಮತಿ ನೀಡಲು ಕ್ರಮ ಕೈಗೊಳ್ಳಲು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, M/s Integrum Energy Infrastructure Private Limited ಇವರಿಗೆ 20 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡಲು.
ii. ಸದರಿ ಯೋಜನೆಗೆ 220/110/33kV Basavana Bageawadi ಸಬ್-ಸ್ಟೇಷನ್‌ಗೆ ಅಥವಾ evacuation ಲಭ್ಯವಿರುವ ಸಬ್-ಸ್ಟೇಷನ್‌ಗಳಿಗೆ KPTCL ನಿಯಮಿತದಿಂದ evacuation ಅನುಮತಿ ಪಡೆದು ಅನುಷ್ಠಾನಗೊಳಿಸುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ.
iii. ಈಗಾಗಲೇ ಇತರೆ ಅಭಿವೃಧ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯ WTG Co-ordinates Overlap ಆಗಿದ್ದಲ್ಲಿ, ಅಂತಹ WTGs ಸಾಮರ್ಥ್ಯವು ರದ್ದುಗೊಳ್ಳುತ್ತದೆ.
iv. ಅಭಿವೃದ್ಧಿದಾರರು ಸದರಿ ಹೈಬ್ರಿಡ್ (ಪವನ ಮತ್ತು ಸೌರ ಮಿಶ್ರಿತ) ವಿದ್ಯುತ್ ಯೋಜನೆಯನ್ನು MNRE ರವರ ಮಾರ್ಗಸೂಚಿಗಳು ಮತ್ತು ರಾಜ್ಯ ಸರ್ಕಾರದ ಹೊಸ RE Policy 2022-27 ರ ಪ್ರಕಾರ ಅನುಷ್ಠಾನಗೊಳಿಸುವುದು.

....3